**ವಿಧಾನ ಪರಿಷತ್ತು ಮಾನ್ಯ ಸದಸ್ಯರಾದ ಶ್ರೀ ಡಿ.ಎಸ್.ಅರುಣ್ ರವರ**
**ಗಮನ ಸೆಳೆಯುವ ನಿಯಮ--72ರ ಸೂಚನೆಗೆ ಉತ್ತರ**

**ಪ್ರಶ್ನೆ: ಶಿವಮೊಗ್ಗ ಜಿಲ್ಲೆಯ ಹುಣಸೋಡು ಜಿಲೆಟಿನ್ ಸ್ಫೋಟ ಪ್ರಕರಣದಲ್ಲಿ ಭಾಗಿಯಾಗಿದ್ದಾರೆಂದು ಹೇಳಲ್ಪಡುವ ಹಾಗೂ ಈವರೆಗೂ ಪತ್ತೆಯಾಗದಿರುವ ಭದ್ರಾವತಿ ನಿವಾಸಿಗಳ ವಿಷಯ ತಿಳಿಯದಿರುವ ಕುರಿತು ಹಾಗೂ ನುರಿತ ತಂಡದ ವಿಭಾಗದಿಂದ ತನಿಖೆಗೆ ಆದೇಶಿಸಬೇಕೆನ್ನುವ ಪ್ರಕರಣದ ಕುರಿತು.**

**ಉತ್ತರ:** ಕಾಣೆಯಾದವರ ಪತ್ತೆಕಾರ್ಯದ ಬಗ್ಗೆ ಈ ಕೆಳಕಂಡಂತೆ ಕ್ರಮವಹಿಸಲಾಗಿದೆ.

**1)** ದೇವೆಂದ್ರ, ಸಿ @ ಶಶಿ ಬಿನ್ ಚಿಕ್ಕ ಬೋರೇಗೌಡ, 32 ವರ್ಷ, ಈತನು ಕಾಣೆಯಾದ ಬಗ್ಗೆ ಈತನ ತಂದೆಯವರಾದ ಚಿಕ್ಕಬೋರೇಗೌಡ ನೀಡಿದ ದೂರಿನ ಮೇರೆಗೆ ಭದ್ರಾವತಿ ತಾಲ್ಲೂಕಿನ ಹೊಸಮನೆ ಶಿವಾಜಿ ಸರ್ಕಲ್ ಪೊಲೀಸ್ ಠಾಣೆ ಗುನ್ನೆ ನಂ: 21/2021 ಕಲಂ: ಮನುಷ್ಯಕಾಣೆ ರೀತ್ಯಾ ಪ್ರಕರಣ ದಾಖಲಾಗಿರುತ್ತದೆ. ದಿನಾಂಕ: 10.12.2022 ರಂದು ಶಿವಮೊಗ್ಗ ಗ್ರಾಮಾಂತರ ಠಾಣೆ ಗುನ್ನೆ ನಂ:24/2021 ರ ಪ್ರಕರಣದಲ್ಲಿ ಡಿಎನ್‌ಎ ವರದಿ ಹಾಗೂ ವೈದ್ಯರ ಅಂತಿಮ ಅಭಿಪ್ರಾಯದ ವರದಿಯಲ್ಲಿ ಕಾಣೆಯಾದ ದೇವೆಂದ್ರ, ಸಿ @ ಶಶಿ ರವರ ದೇಹಕ್ಕೆ ಸಂಬಂದಿಸಿದ ಅಂಶವು ಪತ್ತೆಯಾಗಿದ್ದು, ಕಾಣೆಯಾದ ದೇವೆಂದ್ರ, ಸಿ @ ಶಶಿ ರವರು ದಿನಾಂಕ:21-01-2021 ರಂದು ಶಿವಮೊಗ್ಗ ತಾಲ್ಲೂಕಿನ ಅಬ್ಬಲಗೆರೆ ಗ್ರಾಮದಲ್ಲಿ ನಡೆದ ಸ್ಫೋಟದಲ್ಲಿ ಮೃತಪಟ್ಟಿರುವುದು ದಾಖಲೆಯಿಂದ ದೃಢಪಟ್ಟಿರುವುದರಿಂದ ಈಗಾಗಲೇ ದಾಖಲಾಗಿದ್ದ ಮನುಷ್ಯಕಾಣೆ ಪ್ರಕರಣವನ್ನು ಮುಕ್ತಾಯ ಮಾಡಲಾಗಿರುತ್ತದೆ.

**2)** ನಾಗರಾಜ್ ಬಿನ್ ರಂಗಪ್ಪ ಈತನು ಕಾಣೆಯಾದ ಬಗ್ಗೆ ಈತನ ಮಗನಾದ ವಿಶ್ವನಾಥರವರು ನೀಡಿದ ದೂರಿನ ಮೇರೆಗೆ ಭದ್ರಾವತಿ ತಾಲ್ಲೂಕಿನ ಹೊಸಮನೆ ಶಿವಾಜಿ ಸರ್ಕಲ್ ಪೊಲೀಸ್ ಠಾಣೆ ಯಲ್ಲಿ ಗುನ್ನೆ ನಂ: 19/2021 ಕಲಂ: ಮನುಷ್ಯ ಕಾಣೆ ರೀತ್ಯಾ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿರುತ್ತದೆ.

**3)** ಪುನೀತ್ ತಂದೆ ಲೇ ಸೀತಾರಾಮ, 31 ವರ್ಷ ಈತನು ಕಾಣೆಯಾದ ಬಗ್ಗೆ ಈತನ ತಾಯಿ ರಾಜಮ್ಮರವರು ನೀಡಿದ ನೀಡಿದ ದೂರಿನ ಮೇರೆಗೆ ಹೊಸಮನೆ ಠಾಣೆ ಗುನ್ನೆ ನಂ:21/2021 ಕಲಂ: ಮನುಷ್ಯಕಾಣೆ ರೀತ್ಯಾ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿರುತ್ತದೆ.

ಆದಾಗ್ಯೂ ಸಹ ಹೊಸಮನೆ ಶಿವಾಜಿ ಸರ್ಕಲ್ ಪೊಲೀಸ್ ಠಾಣೆಯಲ್ಲಿ ದಾಖಲಾದ ಗುನ್ನೆ ನಂ: 19/2021, ಹಾಗೂ 21/2021 ರ ಪ್ರಕರಣದಲ್ಲಿ ಕಾಣೆಯಾದವರ ಪತ್ತೆಗಾಗಿ ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ನಗರ ವೃತ್ತ, ಭದ್ರಾವತಿ ರವರನ್ನೊಳಗೊಂಡಂತೆ ವಿಶೇಷ ತಂಡವನ್ನು ರಚನೆ ಮಾಡಲಾಗಿದ್ದು, ಕಾಣೆಯಾದವರ ಪತ್ತೆಕಾರ್ಯ ಪ್ರಗತಿಯಲ್ಲಿರುತ್ತದೆ.

---

ಹೆಚ್‌ಡಿ 201 ಕೆಎಎ 2023

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು